tnkalvi.online

No. of Printed Pages : **6**

6143

Register Number | | | | | | | |

Language – Part IV – KANNADA

Time Allowed : 3.00 Hours] [Maximum Marks : 100

ಸೂಚನೆಗಳು : (1) ಪ್ರಶ್ನೆ ಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿರಿ.

(2) ಉತ್ತರವನ್ನು ಬರೆಯಲು **ಕಪ್ಪು** ಅಥವಾ **ನೀಲಿ** ಶಾಯಿಯನ್ನು ಉಪಯೋಗಿಸಿರಿ.

ಭಾಗ - I

(15 ಅಂಕಗಳು)

ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **15x1=15**

Choose and write the **correct** answer.

1. 'ಅಂಬರ' ಪದದ ಅರ್ಥ _____.

(ಅ) ಆಕಾಶ (ಆ) ಸೂರ್ಯ (ಇ) ಚಂದ್ರ (ಈ) ಭೂಮಿ

2. 'ಪುರಾತನ' ಈ ಪದದ ವಿರುದ್ಧಾರ್ಥ _____.

(ಅ) ಹಳೆಯ (ಆ) ಪ್ರಾಚೀನ (ಇ) ನವೀನ (ಈ) ಹಿಂದಿನ

3. 'ಕಾವ್ಯ' ಈ ಪದದ ತದ್ಭವ ರೂಪ _____.

(ಅ) ಕವಿ (ಆ) ಕಬ್ಬ (ಇ) ಕವಿತೆ (ಈ) ಕಾರ್ಯ

4. 'ಗಂಗೆ' ಈ ಶಬ್ದದಲ್ಲಿನ ಲಿಂಗ _____.

(ಅ) ಪುಲ್ಲಿಂಗ (ಆ) ಸ್ತ್ರೀಲಿಂಗ (ಇ) ನಪುಂಸಕಲಿಂಗ (ಈ) ಪುನ್ನಪುಂಸಕ ಲಿಂಗ

5. 'ತಾಯಿ' ಈ ಪದದಲ್ಲಿರುವ ವಚನ _____.

(ಅ) ಏಕವಚನ (ಆ) ಬಹುವಚನ (ಇ) ದ್ವಿವಚನ (ಈ) ಯಾವುದೂ ಇಲ್ಲ

6. ರಾಘವಾಂಕ ಕವಿಯು _____ ರವರ ಸೋದರಳಿಯ ಹಾಗೂ ಶಿಷ್ಯ.

(ಅ) ಕುಮಾರವ್ಯಾಸ (ಆ) ಹರಿಹರ (ಇ) ಆಂಡಯ್ಯ (ಈ) ಪುರಂದರದಾಸ

[Turn over

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share

tnkalvi.online

7. 'ಶಾಲೆಗೆ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ _____.

(ಅ) ಪ್ರಥಮ (ಆ) ತೃತೀಯ (ಇ) ಚತುರ್ಥಿ (ಈ) ಸಪ್ತಮಿ

8. 'ರಾಮನಾಥ' ಇದು ಯಾವ ವಚನಕಾರರ ಅಂಕಿತವಾಗಿದೆ ?

(ಅ) ಬಸವಣ್ಣ (ಆ) ದೇವರ ದಾಸಿಮಯ್ಯ

(ಇ) ಅಲ್ಲಮಪ್ರಭು (ಈ) ಅಕ್ಕಮಹಾದೇವಿ

9. 'ಸಾಹಸ ಭೀಮ ವಿಜಯಂ, ಕಾವ್ಯದ ಕರ್ತೃ _____.

(ಅ) ಪಂಪ (ಆ) ರನ್ನ (ಇ) ಪೊನ್ನ (ಈ) ಜನ್ನ

10. 'ದಿಗಂತ' ಇದು _____ ಸಂಧಿಗೆ ಉದಾಹರಣೆಯಾಗಿದೆ.

(ಅ) ಲೋಪ ಸಂಧಿ (ಆ) ಆದೇಶ ಸಂಧಿ (ಇ) ಗುಣ ಸಂಧಿ (ಈ) ಜಶ್ತ್ವ ಸಂಧಿ

11. 'ಕಣ್ಮುಚ್ಚಿ' ಈ ಪದದಲ್ಲಿರುವ ಸಮಾಸ _____.

(ಅ) ತತ್ಪುರುಷ ಸಮಾಸ (ಆ) ಕರ್ಮಧಾರಯ ಸಮಾಸ

(ಇ) ಕ್ರಿಯಾ ಸಮಾಸ (ಈ) ದ್ವಂದ್ವ ಸಮಾಸ

12. ಕಂದ ಪದ್ಯದಲ್ಲಿ ಒಟ್ಟು _____ ಮಾತ್ರೆಗಳಿವೆ.

(ಅ) 20 (ಆ) 32 (ಇ) 64 (ಈ) 72

13. ಕನ್ನಡದ ಪ್ರಥಮ ರಾಷ್ಟ್ರಕವಿ _____.

(ಅ) ಗೋವಿಂದ ಪೈ (ಆ) ಬಿ.ಎಂ.ಶ್ರೀ.

(ಇ) ಕುವೆಂಪು (ಈ) ಯು.ಆರ್. ಅನಂತಮೂರ್ತಿ

14. ಅಭಯರುಚಿ ಮತ್ತು ಅಭಯಮತಿಯರ ಗುರುಗಳು _____.

(ಅ) ಅಜಿತಸೇನಾಚಾರ್ಯ (ಆ) ಸುದಾತ್ತಾಚಾರ್ಯ

(ಇ) ಯಶೋಧರ (ಈ) ಮಾರಿದತ್ತ

15. ಡಾ॥ ಗೋಪಾಲ ಕೃಷ್ಣ ಅಡಿಗರ _____ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

(ಅ) ಭಾವತರಂಗ (ಆ) ಭೂಮಿಗೀತ (ಇ) ವರ್ಧಮಾನ (ಈ) ಮಣ್ಣಿನ ವಾಸನೆ

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share

tnkalvi.online

ಭಾಗ - II

(18 ಅಂಕಗಳು)

ವಿಭಾಗ - 1

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಉತ್ತರಿಸಿ. **4x2=8**

Answer **any four** questions.

16. ಹ್ಯೂಯಾನ್‌ತ್ಸಾಂಗ್ ಯಾರು ? ಆತ ಕನ್ನಡಿಗರ ಬಗ್ಗೆ ಏನು ಹೇಳಿದ್ದಾನೆ ?

17. ಅತ್ಯಂತ ಪ್ರಾಚೀನ ಭಾರತೀಯ ಸಂಗೀತ ಪ್ರಕಾರ ಯಾವುದು ?

18. ಗಿಳಿಗಳು ಏನೆಂದು ಉಲಿಯುತ್ತಿದ್ದವು ?

19. ಬಸವಣ್ಣನವರ ಅಭಿಪ್ರಾಯದಲ್ಲಿ ಕುಲಜರು ಎಂದರೆ ಯಾರು ?

20. ಹುಡುಗನು ತಾಯಿಯನ್ನು ತಬ್ಬಿಕೊಳ್ಳಲು ಹೋದಾಗ ಆಕೆ ಏನು ಮಾಡಿದಳು ?

21. ಸಂಪರ್ಕ, ರೋಮಾಂಚನ – ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿ.

ವಿಭಾಗ - 2

ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ಐದಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿ. **5x2=10**

Answer **any five** questions briefly.

22. 'ಬಿದ್ದವನನ್ನು ಹೊಡೆಯೆನು' ಎಂದು ದುರ್ಯೋಧನನು ಏನು ಮಾಡಿದನು ?

23. ಸಿದ್ಧರಾಮನು ಹೇಳಿದ ಮಲ್ಲಯ್ಯನ ಕುರುಹುಗಳು ಯಾವುವು ?

24. ಹೇಮಂತ ಋತು ಬರುವಾಗ ಇಳೆ ಹೇಗಿರುತ್ತದೆ ?

25. ಅಲ್ಲಮಪ್ರಭು ಲೋಕವು ಯಾವುದಕ್ಕಾಗಿ ಸತ್ತಿತೆಂದು ಹೇಳುತ್ತಾನೆ ?

26. ಕವಿ ಅಡಿಗರು ಯಾವ ಗುಹೆಯಿಂದ ಹೊರಬರುವಂತೆ ಯುವಕರನ್ನು ಕೇಳಿದ್ದಾರೆ ?

27. ಪ್ರೇಮಾಗ್ನಿ, ಒಮ್ಮತ – ಈ ಪದಗಳನ್ನು ಬಿಡಿಸಿ ಸಮಾಸವನ್ನು ಹೆಸರಿಸಿ.

28. ಸರ್ವಾಂಗ, ಗುಹೇಶ್ವರ – ಈ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ತಿಳಿಸಿ.

[Turn over

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share

tnkalvi.online

ಭಾಗ - III

(18 ಅಂಕಗಳು)

ಕೊಟ್ಟಿರುವ ಪ್ರಶ್ನೆಗಳಲ್ಲಿ ಪ್ರತಿ ವಿಭಾಗದಿಂದ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಮಾತ್ರ ಉತ್ತರಿಸಿ. (**34** ನೇ ಪ್ರಶ್ನೆ **ಕಡ್ಡಾಯ**).

Answer **any two** questions from each section. (Question No. **34** is **compulsory**).

ವಿಭಾಗ - 1 **2x3=6**

29. ನಿಜವಾದ ವ್ಯಾಸಂಗ ಹೇಗಿರಬೇಕೆಂದು ಲೇಖಕರು ಹೇಳುತ್ತಾರೆ ?

30. ದೇವಾಲಯಗಳ ನಿರ್ಮಾಣದ ಬಗೆಗೆ ಬಸವಣ್ಣನವರ ವಿಚಾರಗಳಾವುವು ?

31. ಜಿ.ಪಿ. ರಾಜರತ್ನಂ ಅವರು ಕನ್ನಡವನ್ನು ಹೇಗೆ ವರ್ಣಿಸಿದ್ದಾರೆ ?

ವಿಭಾಗ - 2 **2x3=6**

32. ಸೋತು ಬಿದ್ದಿರುವ ದುರ್ಯೋಧನನನ್ನು ಕಂಡು ಭೀಮನು ಏನು ಮಾಡಿದನು ?

33. 'ನವ ವಿಧಾತರು' ಎಂಬ ಪದವನ್ನು ಅಡಿಗರು ಹೇಗೆ ಸಮರ್ಥಿಸಿಕೊಂಡಿದ್ದಾರೆ ?

34. ಈ ಪದ್ಯಭಾಗವನ್ನು ಪೂರ್ತಿಗೊಳಿಸಿ.

(ಅ) ಚೆಂಗುಡಿಯ ಸಿಂಗರದ.....
..... ದೀನರೆಂದೆನಿಸಿ.

ಅಥವಾ

(ಆ) ಅಜ್ಞಾನವೆಂಬ ತೊಟ್ಟಿಲೊಳಗೆ.....
..... ಲಿಂಗವ ಕಾಣಬಾರದು.

ವಿಭಾಗ - 3 **2x3=6**

35. ಭೋಗ ಷಟ್ಪದಿ ಎಂದರೇನು ? ಉದಾಹರಣೆ ಕೊಡಿ.

36. ಉತ್ಪ್ರೇಕ್ಷಾಲಂಕಾರ ಎಂದರೇನು ? ಉದಾಹರಣೆ ಕೊಡಿ.

37. 'ಕರೆದಡೇ ಕೋಯೆನ್ನೆ ಮಲ್ಲಯ್ಯ ಬೆಂಬತ್ತಿ
ಹರಿದೆಡೇ ಕೋ ಯೆನ್ನೆ ಮಲ್ಲಯ್ಯ'
ಈ ಪದ್ಯಕ್ಕೆ ಪ್ರಸ್ತಾರ ಹಾಕಿರಿ.

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share

tnkalvi.online

ಭಾಗ – IV

(25 ಅಂಕಗಳು)

ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ. **5x5=25**

Answer **all** the questions.

38. (ಅ) ಬಿ.ಎಂ.ಶ್ರೀ.ಯವರು ಕನ್ನಡ ನಾಡು ನುಡಿಯ ಬಗ್ಗೆ ಹೇಗೆ ವಿವರಿಸಿದ್ದಾರೆ ?

ಅಥವಾ

(ಆ) ಅಜ್ಜ ಮತ್ತು ಬೂಟ್ ಪಾಲಿಶ್ ಹುಡುಗನ ಸಂಬಂಧವನ್ನು ವಿವರಿಸಿ.

39. (ಅ) 'ಕಂಡು ಬೆಱಗಾದರಾ ಪುಣ್ಯದಂಪತಿಗಳು' ಏಕೆ ?

ಅಥವಾ

(ಆ) ಕನ್ನಡ ನಾಡಿನ ಕವಿ ಹಾಗೂ ಕಲೆಯ ಮಹತ್ವವೇನು ? ವಿವರಿಸಿ.

40. ನಿಮ್ಮ ಗ್ರಾಮಕ್ಕೆ ಗ್ರಂಥಾಲಯವನ್ನು ಒದಗಿಸಿಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಅರ್ಜಿ ಬರೆಯಿರಿ.

41. 'ಕೈ ಕೆಸರಾದರೆ ಬಾಯಿ ಮೊಸರು' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

42. (ಅ) ನದಿಯ ನೀರಿನಲ್ಲಿ ಒಂದು ಇರುವೆಯು ಮುಳುಗಿ ಸಾಯುವ ಸ್ಥಿತಿಯಲ್ಲಿತ್ತು. ಇದನ್ನು ಆ ನದಿಯ ದಡದಲ್ಲಿದ್ದ ಮರದ ಮೇಲೆ ಕುಳಿತಿದ್ದ ಪಾರಿವಾಳ ನೋಡಿತು.....

ಈ ಕತೆಯನ್ನು ಪೂರ್ಣಗೊಳಿಸಿ. ಸೂಕ್ತ ಶೀರ್ಷಿಕೆಯನ್ನು ಬರೆಯಿರಿ.

ಅಥವಾ

(ಆ) ಈ ಆಂಗ್ಲ ಗಾದೆಗಳಿಗೆ ಸರಿಹೊಂದುವ ಕನ್ನಡ ಗಾದೆ ಮಾತನ್ನು ಬರೆಯಿರಿ.

(i) Work is Worship.

(ii) Prevention is better than cure.

(iii) Honesty is the best policy.

(iv) Knowledge is power.

(v) Where there is a will, there is a way.

[Turn over

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share

tnkalvi.online

ಭಾಗ - V

(24 ಅಂಕಗಳು) **3x8=24**

43. (ಅ) ಭಾರತೀಯ ಸಾಹಿತ್ಯದ ಬಗ್ಗೆ ವಿವರಿಸಿ.

ಅಥವಾ

(ಆ) ಮಾರಿಯ ಗುಡಿ ಹೇಗಿತ್ತು ? ವರ್ಣಿಸಿರಿ.

44. (ಅ) ಸುಂದರಿಯು ತನ್ನ ಮನೆಯಿಂದ ಹಿಂದಿರುಗಿ ಕಾಡಿಗೆ ಹೋಗಲು ಕಾರಣವೇನು ?

ಅಥವಾ

(ಆ) ಬಾಲ್ಯದಲ್ಲಿ ಮನಸೂರರ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗೀತ ಪರಿಸರವನ್ನು ವಿವರಿಸಿ.

45. ಕೊಟ್ಟಿರುವ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ.

(ಅ) ಜಲಮಾಲಿನ್ಯ

(ಆ) ಅನೇಕತೆಯಲ್ಲಿ ಏಕತೆ

- o O o -

tnkalvi.online

TN Kalvi Online · tnkalvi.online/question-papers/class-10-kannada-part-iv-public-may-2022 · Source: DGE TN
Share your study materials with us: tnkalvi.online/share